ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಮೂಶಿ/ಪರೀಕ್ಷೆ/ನೊ&ಫ/2017-18 (ಖಾಸಗಿ)

ದಿನಾಂಕ:10-11-2017

ಅಧಿಸೂಚನೆ

ವಿಷಯ: 2018ರ ಮಾರ್ಚ್ ತಿಂಗಳಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳ ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 25-10-2017

ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸುತ್ತಿರುವ ದ್ವಿತೀಯ ಪಿಯುಸಿ ಮಾರ್ಚ್ 2018ರ ವಾರ್ಷಿಕ ಪರೀಕ್ಷೆಗೆ ಉಲ್ಲೇಖದನ್ವಯ ಪಿಯುಸಿ ಶಿಕ್ಷಣ ಬೋಧಿಸುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲು ದಿನಾಂಕ: 31-10-2017ರ ವರಗೆ (₹ 360-00 ವಿಶೇಷ ದಂಡ ಶುಲ್ಕ ದೊಂದಿಗೆ ₹ 500/- ನ್ನು ಸೇರಿದಂತೆ ಒಟ್ಟು ₹ 860 ಹಾಗೂ ಸಲ್ಲುವ ಇತರೆ ಶುಲ್ಕ ಗಳೊಂದಿಗೆ ನೋಂದಾಯಿಸಿಕೊಳ್ಳಲು ಗರಿಷ್ಠ ದಂಡಶುಲ್ಕದೊಂದಿಗೆ) ಕಾಲಾವಕಾಶ ನೀಡಲಾಗಿತ್ತು.

ಅಭ್ಯರ್ಥಿಗಳ ಹಾಗೂ ಪೋಷಕರ ಕೋರಿಕೆ ಹಾಗೂ ಒತ್ತಾಯದ ಮೇರೆಗೆ ಸದರಿ ಕಾಲಾವಕಾಶವನ್ನು ದಿನಾಂಕ:16-11-2017 ರವರೆಗೆ ದಂಡ ಶುಲ್ಕ ₹ 360-00ರ ಜೊತೆಗೆ ವಿಶೇಷ ದಂಡ ಶುಲ್ಕ ₹ 500-00ನ್ನು ಸೇರಿದಂತೆ ಒಟ್ಟು ದಂಡ ಶುಲ್ಕ ₹ 860-00 ಹಾಗೂ ಸಲ್ಲುವ ಇತರೆ ಶುಲ್ಕದೊಂದಿಗೆ ನೋಂದಾಯಿಸಿಕೊಳ್ಳಲು ದಿನಾಂಕ: 16-11-2017 ರವರೆಗೆ ವಿಸ್ತರಿಸಲಾಗಿದೆ. ಪ್ರಾಂಶುಪಾಲರು, ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ಸಂಬಂಧಿಸಿದಂತೆ ಉಳಿದ ಎಲ್ಲಾ ಸೂಚನೆಗಳನ್ನು ಉಲ್ಲೇಖ (1)ರಲ್ಲಿ ಇರುವಂತೆ ತಪ್ಪದೆ ಪಾಲಿಸುವುದು.

**ಸದರಿ ಪರೀಕ್ಷೆಗಳಿಗೆ ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಇದೇ ಕಡೆ ಅವಕಾಶವಾಗಿರುತ್ತದೆ ಹಾಗೂ ಈ ಕಾಲಾವಾಕಾಶವನ್ನು ಯಾವುದೇ ಕಾರಣಕ್ಕೆ ಮುಂದೂಡಲಾಗುವುದಿಲ್ಲ.**

ಸದರಿ ವಿಶೇಷ ಕಾಲಾವಕಾಶದಲ್ಲಿ ಸಲ್ಲಿಸಲಾದ ಖಾಸಗಿ ಅಭ್ಯರ್ಥಿಗಳ ಶುಲ್ಕಗಳನ್ನು ದಿನಾಂಕ:17-11-2017 ರಂದು ಖಜಾನೆಗೆ ಜಮಾಯ ಮಾಡುವುದು ಹಾಗೂ ಅರ್ಜಿಗಳನ್ನು ಸಂಬಂಧಿಸಿದ ಪ್ರಾಚಾರ್ಯರು ಮುದ್ದಾಂ ದಿನಾಂಕ: 18-11-2017 ರಂದು ಕೇಂದ್ರ ಕಛೇರಿಗೆ ಸಲ್ಲಿಸುವುದು. (ಮಾನ್ಯ ನಿರ್ದೇಶಕರ ಆದೇಶದಂತೆ.)

ಜಂಟಿ ನಿರ್ದೇಶಕರು ಪರೀಕ್ಷೆ
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಸಹಾಯಕ ನಿರ್ದೇಶಕರು, ಇ-ಆಡಳಿತ (ಅಂತರ ಜಾಲದಲ್ಲಿ ಪ್ರಕಟಿಸಲು)
5. ಕಛೇರಿ ಪ್ರತಿ